ಅಲೆಮಾರಿ ಸಮುದಾಯ ಬುಡ್ಗಜಂಗಮದ ದಟ್ಟಚಿತ್ರಣ ಕೊಡುವ ಬಾಲಗುರುಮೂರ್ತಿಯವರ ವಿಶಿಷ್ಟ ಆತ್ಮಕಥೆ 'ಬಯಲ ಬೆನ್ನೇರಿ'. ಈ ಆತ್ಮಕಥನ ಬಡ ಹುಡುಗನೊಬ್ಬ ಸಾಗಿಬಂದ ದಾರಿಯ ಚಿತ್ರಣ ಕೊಡುತ್ತಲೇ ಸಮುದಾಯವೊಂದರ ಸಂಸ್ಕೃತಿ, ಆಚರಣೆ, ಬದುಕುವ ವಿಧಾನ ಹಾಗೂ ಅವರ ನೋವಿನ ಕತೆಯನ್ನೂ ಹೇಳುತ್ತದೆ. 'ಮಯೂರ'ದ ಓದುಗರಿಗಾಗಿ ಸದ್ಯದಲ್ಲೇ ಪ್ರಕಟವಾಗಲಿರುವ ಈ ಕಥನದ ಕೆಲವು ಪುಟಗಳು ಇಲ್ಲಿವೆ

ಕಾಡಿನ ಬಿದಿರಜಲ್ಲೆಯಂತೆ ಎತ್ತರಕ್ಕಿದ್ದ ನನ್ನ ಅಜ್ಜಿ ನಾರಕ್ಕನಿಗೆ ಕುಳ್ಳಗಿದ್ದ ನನ್ನ ಅಜ್ಜ ಈಬೂತಿ ಎಂಕಟಪ್ಪನ ಜೊತೆ ಮದುವೆ ಮಾಡಲಾಯಿತು. ತಂದೆ ಚಿಕ್ಕ ವಯಸ್ಸಿನಲ್ಲಿಯೇ ಸತ್ತರೆ, ತಾಯಿ ಕಂದಮ್ಮನನ್ನು ನೂನಿಗುರಾಯಿಗೆ ಮೂರನೆ ಹೆಂಡತಿಯನ್ನಾಗಿ ಕೂಡಿಕೆ ಮಾಡಿಸಲಾಗಿತ್ತು. ಹೀಗಾಗಿ ಸೋದರ ಮಾಮ ಕೇಳಿಕೆ ದೊಡ್ಡೀರಯ್ಯನ ನೆರಳಲ್ಲಿ ಬೆಳೆದ ಅಜ್ಜಿ ಕೇಳಿಕೆಯಲ್ಲಿ ಮೇಳ ಹಾಡುತ್ತಿದ್ದಳು. ಬಾಲನಾಗಮ್ಮ ನಾಟಕದ ಮಾಯಲು ಮರಾಠಿಯ ಪಾತ್ರ ಮಾಡುತ್ತಿದ್ದ ಪಸಿಕೋಟ್ಲನ ಮ್ಯಾಲೆ ಗ್ಯಾನ ಇಟ್ಟುಕೊಂಡಿದ್ದರೂ ಅವನ ಜೊತಿ ಮದುವಿಯಾಗಲಿಲ್ಲ. ಕುಲದಲ್ಲಿನ ಸಹಜ ಕತಿಯಂಗ ಅವನ ಜೊತಿ ದ್ಯಾಸಂತರ ನಡೆದುಬಿಡಬಹುದಿತ್ತು. ಆದರೆ, ನಲವತ್ತು ನಾಟಕಗಳ ಸರದಾರ ಮಾಮ ದೊಡ್ಡೀರಯ್ಯನಿಗೆ ಎದುರಾಗಿ ಬದುಕಲು ಹಿಂದೇಟು ಹಾಕಿ ನನ್ನ ಅಜ್ಜ, ಈಬೂತಿ ಎಂಕಟಪ್ಪನ ಜೊತಿ ಕೂಡಿಕೊಂಡಳು.

ಕೇಳಿಕೆ ಮುಗಿಸಿಕೊಂಡು ಊರಾಚೆ ಬಯಲಲ್ಲಿ ಟೆಂಟು ಹಾಕಿಕೊಂಡು ಗಂಡಸರು ಗಂಜಿ ಕುಡಿದು ಹಾಡುತ್ತಿದ್ದರೆ, ಹೆಂಗಸರು, ಮುದುಕರು, ತಕಾರಿ(ಜೋಳಿಗೆ) ಹೊತ್ತು ಊರೊಳಗೆ ಸುತ್ತಿ ಬಂದರೆ ಜೋಳಿಗೆ ತುಂಬಾ ಮುದ್ದೆ ಚೂರುಗಳು ತುಂಬಿ ಅದರ ತುಂಬಾ ನಾನಾ ಸಾರುಗಳು ಸುಮ್ಮಿಶ್ರವಾಗಿ ಹೊಸ ಬಣ್ಣ ಪಡೆದಿರುತ್ತಿತ್ತು. ಊರಿಂದ ಆಚೆಗೆ ಬರುವಾಗ ನಾಯಿಗಳ ದಂಡು ಗೊಳ್ಳಿಕ್ಕಿದರೂ ಯಾರೂ ಹೆದರುತ್ತಿರಲಿಲ್ಲ.

ಅಷ್ಟಕ್ಕೂ ನನ್ನ ಅಜ್ಜಿಯ ಬಾಲ್ಯ ದುರಂತದ ಮಡು. ಅವಳ ತಾಯಿ ಕಂದಮ್ಮನಿಗೆ ಹತ್ತು ವರ್ಸಕ್ಕೆ ಪಾನಿಗಂಟಿ ಪೆದ್ದಯ್ಯನಿಗೆ ಸಂತೆ ಬಯಲೊಳಗೆ ಮದುವಿ ಮಾಡಿದ್ದರು. ಮದುವಿ ಮುಗಿದ ಮ್ಯಾಲ ಹಂದಿ ಮರಿಯನ್ನು ಕೊಯ್ದು ಶಾಕನ ಮಾಡಿಕೊಂಡು ಇಡೀ ಕುಲದ ಬಳಗ ಹೆಂಡದಂಗಡಿಗೆ ನಡೆದಿತ್ತು.

ಎರಡು ವರ್ಸಕ್ಕೆ ಎರಡು ಹೆಣ್ಣುಮಕ್ಕಳನ್ನು ಹೆತ್ತ ಕಂದಮ್ಮ, ಆ ಮಕ್ಕಳನ್ನು ಮಾವನ ಬಳಗದಲ್ಲಿ ಬಿಟ್ಟು ಗಂಡ ಪಾನಿಗಂಟಿ ಜೊತೆಯಲ್ಲಿ ಆವಣಿ ಜಾತ್ರೆಗೆ ಹೊರಟಿದ್ದಳು.

ಪಾನಿಗಂಟಿ ಪೆದ್ದಯ್ಯ ಸಿವನ ಯಾಸ ಹಾಕಿಕೊಂಡು ಊರೊಳಗೆ ಹೊರಟರೆ ರಾಗಿಹುರುಳಿ ಹಸಿ ಹಿಟ್ಟು ಜೋಳಿಗೆ ತುಂಬಿಹೋಗುತ್ತಿತ್ತು. ಮತ್ತೊಂದು ಕಡೆ ಕಂದಮ್ಮ ಬುರ್ರಕತೆ ಹಾಡಿಕೊಂಡು ಬರುತ್ತಿದ್ದಳು. ಪೆದ್ದಯ್ಯ ಊರೊಳಗಿಂದ ಯಾಸ ಮುಗಿಸಿ ಊರಾಚೆ ದಾರಿಯಲ್ಲಿ